# KARNATAK UNIVERSITY, DHARWAD

No. KU-Syndicate/ Proceedings-21/2022-23/A-24/ Date: 18 JUN 2022

## "CONFIDENTIAL"

The Special Syndicate meeting was held on **18th June, 2022 at 12:00 Noon** in the Syndicate Hall, Administrative Building, Karnatak University, Dharwad and the proceedings of the Syndicate meeting are as follows:

**The following members were present**

| | | |
|---|---|---|
| 1. | Prof. K.B. Gudasi, Vice-Chancellor K.U.Dharwad | Chairman |
| 2. | Dr. Mallikarjun Patil, K.U. Dharwad | Member |
| 3. | Smt. Hamsaveni N., Dharwad | Member |
| 4. | Dr. K.D. Haveripeth, Salakinakoppa, Dharwad | Member |
| 5. | Dr.(Smt). Kamala D. Dhawale, Dharwad | Member |
| 6. | Sri. R.B. Godi, Kundagol | Member |
| 7. | Prof. M.K. Shaikh, Bhatakal | Member |
| 8. | Sri Jayaprakash S. Badami, Navalgund | Member |
| 9. | Sri. Prakash Rayakar, Hubballi | Member |
| 10. | Dr. Shantanagouda C. Jakkanagoudar, Shiggaon | Member |
| 11. | Sri Sudhindra Deshpande, Dharwad | Member |
| 12. | Sri Ravikumar Maliger, Dharwad | Member |
| 13. | Dr. B. Basavanagoud., K.U. Dharwad | Member |
| 14. | Dr. C. Krishnamurthy (Evaluation), K.U. Dharwad | Member |
| 15. | Dr.(Smt). A.N. Tamragundi, I/c Finance Officer, K.U. Dharwad | Special Invitee |
| 16. | Sri. Yashpal Kshirsagar. Registrar (Admn), K.U. Dharwad | Member Secretary |

ನಿಯಮಾನುಸಾರ ಕನಿಷ್ಠ ಅಗತ್ಯ ಸಂಖ್ಯೆ 08ಕ್ಕಿಂತ ಹೆಚ್ಚು ಅಂದರೆ 16 ಜನ ಸದಸ್ಯರುಗಳು ಹಾಜರಿರುವುದನ್ನು ಖಚಿತಪಡಿಸಿಕೊಂಡು ನಿಗದಿತ ಸಮಯಕ್ಕೆ ಸರಿಯಾಗಿ ಸಭೆಯನ್ನು ಪ್ರಾರಂಭಿಸಲಾಯಿತು. ಮೊದಲನೆಯದಾಗಿ ಮಾನ್ಯ ಕುಲಪತಿಗಳು ಸಭೆಯಲ್ಲಿ ಹಾಜರಿದ್ದ ಎಲ್ಲ ಸದಸ್ಯರುಗಳಿಗೆ ಸ್ವಾಗತವನ್ನು ಕೋರಿ, ನೂತನವಾಗಿ ನೇಮಕಗೊಂಡ ಕುಲಸಚಿವರು (ಮೌಲ್ಯಮಾಪನ) ಡಾ. ಸಿ. ಕೃಷ್ಣಮೂರ್ತಿ ಇವರನ್ನು ಪರಿಚಯಿಸಿ, ಸ್ವಾಗತಿಸಿದರು. ನಂತರ ಸಭೆಯ ಕಲಾಪವನ್ನು ಈ ಮುಂದಿನಂತೆ ಪ್ರಾರಂಭಿಸಲಾಯಿತು.

ಕುಲಸಚಿವರು 18/6

ಕುಲಪತಿಗಳು 18/6/22

**ಕಲಂ ಸಂಖ್ಯೆ 01:- ವಿಷಯ:** 2022-23ನೇ ಸಾಲಿನಲ್ಲಿ ಹೊಸ ಮಹಾವಿದ್ಯಾಲಯ ಪ್ರಾರಂಭಿಸಲು, ಹೊಸ ಕೋರ್ಸ ಪ್ರಾರಂಭಿಸಲು, ವೃತ್ತಿಪರ ಕೋರ್ಸಗೆ ಪ್ರವೇಶ ಮಿತಿ ಹೆಚ್ಚಳಕ್ಕಾಗಿ, ಹೊಸ ಶಾಶ್ವತ ಸಂಯೋಜನೆ ಮತ್ತು ಸ್ವಯಂ ಮುಚ್ಚುವ ಮಹಾವಿದ್ಯಾಲಯ/ಕೋರ್ಸಗಳ ಕುರಿತು ವಿದ್ಯಾವಿಷಯಕ್ ಪರಿಷತ್‌ನಲ್ಲಿ ಕೈಗೊಂಡ ಕ್ರಮವನ್ನು ಆಡಳಿತ ಮಂಡಳಿಯ ಸಭೆಯ ಕಲಂನ್ನು ಅನುಮೋದನೆಗಾಗಿ ಮಂಡಿಸಿದೆ.

**ಟಿಪ್ಪಣಿ :**

2022-23ನೇ ಸಾಲಿನಲ್ಲಿ ಹೊಸ ಮಹಾವಿದ್ಯಾಲಯ ಪ್ರಾರಂಭಿಸಲು, ಸ್ನಾತಕ/ಸ್ನಾತಕೋತ್ತರ ಹೊಸ ಕೋರ್ಸ ಪ್ರಾರಂಭಿಸಲು, ವೃತ್ತಿಪರ ಕೋರ್ಸಗೆ ಪ್ರವೇಶ ಮಿತಿ ಹೆಚ್ಚಳಕ್ಕಾಗಿ, ಶಾಶ್ವತ ಸಂಯೋಜನೆ ಮತ್ತು ಸ್ವಯಂ ಮುಚ್ಚುವ ಮಹಾವಿದ್ಯಾಲಯ/ಕೋರ್ಸ ಕುರಿತು ಬಂದಿರುವ ಪ್ರಸ್ತಾವನೆಗಳನ್ನು ಸ್ಥಾನಿಕ ತನಿಖಾ ಸಮಿತಿಯ ಚೇರಮನ್/ಸದಸ್ಯರು ಮಹಾವಿದ್ಯಾಲಯಕ್ಕೆ ಭೇಟಿ ನೀಡಿ ಪರಿಶೀಲಿಸಿ ವರದಿ ಸಲ್ಲಿಸಿದ್ದು, ಸದರ ವರದಿಯನ್ನು ದಿನಾಂಕ 18/06/2022 ರಂದು ಜರುಗಿದ ವಿದ್ಯಾವಿಷಯಕ್ ಪರಿಷತ್ ಸಭೆಯ ಮುಂದೆ ಈ ಕೆಳಗಿನಂತೆ ಮಂಡಿಸಲಾಗಿತ್ತು.

| 2022-23ನೇ ಸಾಲಿನಲ್ಲಿ ಹೊಸ ಮಹಾವಿದ್ಯಾಲಯ ಪ್ರಾರಂಭಿಸಲು ಬಂದ ಪ್ರಸ್ತಾವನೆ | ವೃತ್ತಿಪರ ಕೋರ್ಸಗಳಿಗೆ ಪ್ರವೇಶ ಮಿತಿ ಹೆಚ್ಚಳಕ್ಕಾಗಿ ಸಲ್ಲಿಸಿದ ಪ್ರಸ್ತಾವನೆ | ಸ್ನಾತಕ/ಸ್ನಾತಕೋತ್ತರ ಹೊಸ ಕೋರ್ಸಗಳಿಗೆ ಸಂಬಂಧಿಸಿದಂತೆ ಬಂದ ಪ್ರಸ್ತಾವನೆ | ಹೊಸ ವಿಷಯಕ್ಕೆ ಸಂಬಂಧಿಸಿದಂತೆ ಬಂದ ಪ್ರಸ್ತಾವನೆ | ಹೊಸ ಶಾಶ್ವತ ಸಂಯೋಜನೆಗೆ ಸಂಬಂಧಿಸಿದಂತೆ ಬಂದ ಪ್ರಸ್ತಾವನೆ | ಸ್ವಯಂ ಮುಚ್ಚುವ ಸಂಯೋಜನೆಗೆ ಸಂಬಂಧಿಸಿದಂತೆ ಬಂದ ಪ್ರಸ್ತಾವನೆ |
|---|---|---|---|---|---|
| A | B | C | D | E | F |
| 07 | 04 | 07 | 04 | 09 | 01 |

ಸದರ ಸಭೆಯಲ್ಲಿ ಕೂಲಂಕುಷವಾಗಿ ಪರಿಶೀಲಿಸಿ ಸರ್ಕಾರ ಹೊರಡಿಸಿದ ಮಾರ್ಗಸೂಚಿಯ ಕ್ರಮ ಸಂಖ್ಯೆ ಇಡಿ 29 ಯುಎನ್‌ಇ ದಿನಾಂಕ 12/02/2021ರಲ್ಲಿ ಪ್ರಕಟಿಸಿದಂತೆ ಸರ್ಕಾರ ಸೂಚಿಸಿದ ಮಾನದಂಡಗಳನ್ನು (Defined Parameters) ಪೂರೈಸಿದ 06 ಮಹಾವಿದ್ಯಾಲಯಗಳಿಗೆ ಶಿಫಾರಸ್ಸಿನೊಂದಿಗೆ ಸರ್ಕಾರದ ಅನುಮೋದನೆಗಾಗಿ ಕಳುಹಿಸಲು ನಿರ್ಣಯಿಸಲಾಯಿತು ಹಾಗೂ ಬಿ.ಸಿ.ಡಿ.ಇ.ಎಫ್. ಗಳಲ್ಲಿ ತೋರಿಸಲಾದ ಹೊಸ ಕೋರ್ಸ ಪ್ರಾರಂಭಿಸಲು, ವೃತ್ತಿಪರ ಕೋರ್ಸಗೆ ಪ್ರವೇಶ ಮಿತಿ ಹೆಚ್ಚಳಕ್ಕಾಗಿ, ಶಾಶ್ವತ ಸಂಯೋಜನೆ ಮತ್ತು ಸ್ವಯಂ ಮುಚ್ಚುವ ಮಹಾವಿದ್ಯಾಲಯ/ಕೋರ್ಸಗಳ ಪ್ರಸ್ತಾವನೆಯನ್ನು ಸರ್ಕಾರ ನಿಗದಿಗೊಳಿಸಿದ ಅಂಕಗಳು ಬಂದಿರುವ ಮಹಾವಿದ್ಯಾಲಯಗಳಿಗೆ ಶಿಫಾರಸ್ಸಿನೊಂದಿಗೆ ಸರ್ಕಾರಕ್ಕೆ ಕಳುಹಿಸಲು ನಿರ್ಣಯಿಸಲಾಯಿತು.

ಆದ್ದರಿಂದ, 2022-23ನೇ ಸಾಲಿನಲ್ಲಿ ವಿದ್ಯಾವಿಷಯಕ್ ಪರಿಷತ್ ಸಭೆಯಲ್ಲಿ ಕೈಗೊಂಡ ನಿರ್ಣಯವನ್ನು ಪರಿಶೀಲಿಸಿ ಅನುಮೋದನೆಗಾಗಿ ಸಿಂಡಿಕೇಟ ಸಭೆಯ ಮುಂದೆ ಮಂಡಿಸಲಾಯಿತು.

**ಠರಾವು**

"2022-23ನೇ ಸಾಲಿನಲ್ಲಿ ಹೊಸ ಮಹಾವಿದ್ಯಾಲಯ ಪ್ರಾರಂಭಿಸಲು, ಹೊಸ ಕೋರ್ಸ ಪ್ರಾರಂಭಿಸಲು, ವೃತ್ತಿಪರ ಕೋರ್ಸಗೆ ಪ್ರವೇಶ ಮಿತಿ ಹೆಚ್ಚಳಕ್ಕಾಗಿ, ಹೊಸ ಶಾಶ್ವತ ಸಂಯೋಜನೆ ಮತ್ತು ಸ್ವಯಂ ಮುಚ್ಚುವ ಮಹಾವಿದ್ಯಾಲಯ/ಕೋರ್ಸಗಳ ಕುರಿತು ವಿದ್ಯಾವಿಷಯಕ್ ಪರಿಷತ್‌ನಲ್ಲಿ ಕೈಗೊಂಡ ನಿರ್ಣಯವನ್ನು ಸಿಂಡಿಕೇಟ ಸಭೆಯು ಅನುಮೋದಿಸಿತು"

ಕುಲಸಚಿವರು 18/6

ಕುಲಪತಿಗಳು 18/6/22